## ೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## **ಸಿ.ಸಿ. 410/2022**

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಃ ಮರಿಗೌಡ | ಚಾಸಾಃ **6** ಪ್ರಾಸಾಃ **6** |
| ತಂದೆಯ ಹೆಸರು | ಃ ಚೆನ್ನೇಗೌಡ | |
| ವಯಸ್ಸು | ಃ 50 ವರ್ಷ | |
| ವೃತ್ತಿ | ಃ ವಾಟರ್ ಮ್ಯಾನ್ | |
| ವಾಸಸ್ಥಳ | ಃ ದೊಡ್ಡಬ್ಯಾಡರಹಳ್ಳಿ ಗ್ರಾಮ | |

ದಿನಾಂಕಃ **24-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ಸುಮಾರು 3 ವರ್ಷಗಳ ಹಿಂದೆ ಸರ್ವೇಯರ್ ಮತ್ತು ಪಂಚಾಯಿತಿಯವರು ಕುಡಿಯುವ ನೀರಿನ ಟ್ಯಾಂಕ್ ಕಟ್ಟಲು ನಮ್ಮ ಊರಿನಲ್ಲಿ ಜಾಗ ನೋಡಿದ್ದರು. ಅದಕ್ಕೆ ಆರೋಪಿಗಳು ಅದು ತಮ್ಮ ಜಮೀನು ಎಂದು ಹೇಳಿಕೊಳ್ಳುತ್ತಿದ್ದರು. ತಹಶೀಲ್ದಾರ್ ರವರು ಸರ್ವೇಯರ್ ಹೇಳಿದಂತೆ ನಾನು ಅಳತೆ ಕಲ್ಲನ್ನು ನೆಟ್ಟೆ, ಆಮೇಲೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಬೇರೆ ಏನು ಗೊತ್ತಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

<u>ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ</u>

**01.** ದೊಡ್ಡಬ್ಯಾಡರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಕಟ್ಟಲು ಗ್ರಾಮ ಪಂಚಾಯಿತಿ ವತಿಯಿಂದ ಹದ್ದುಬಸ್ತು ಅಳತೆ ಮಾಡಿಸಿ ಕಲ್ಲನ್ನು ನೆಟ್ಟಿದ್ದು, ದಿಃ16.09.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಮತ್ತು ರವಿ ವಾಟರ್ ಟ್ಯಾಂಕ್ ನಿರ್ಮಾಣ ಮಾಡಲು ಪೂಜೆ ಮಾಡಿದ ಸ್ಥಳದಲ್ಲಿ ಇರುವಾಗ ಆರೋಪಿಗಳು ಬಂದು ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿದರು ಎಂದರೆ ಸರಿಯಲ್ಲ. ಸರಿದ ವಿಚಾರವನ್ನು ನಾನ ಪಿ.ಡಿ.ಒ. ರವರಿಗೆ ತಿಳಿಸಿದೆ ಎಂದರೆ ಸರಿಯಲ್ಲ. ತದನಂತರ ತಾಲ್ಲೂಕು ಕಛೇರಿಯ ಅಧಿಕಾರಿಗಳು ಬಂದು ಸ್ಥಳದಲ್ಲಿ ಸ್ಥಳ ಪರಿಶೀಲನೆ ಮಾಡಿದರು ಎಂದರೆ ಸರಿಯಲ್ಲ. ದಿಃ 17.09.2021 ರಂದು ಆರೋಪಿಗಳೆಲ್ಲ ಗ್ರಾಮ ಪಂಚಾಯಿತಿ ಕಛೇರಿಗೆ ಬಂದು ಚಾ.ಸಾ-2 ರವರ ಮೇಲೆ ಜಗಳ ತೆಗೆದು ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದರು ಎಂದರೆ ಸರಿಯಲ್ಲ. ಆರೋಪಿಗಳು ಮದ್ಯಾಹ್ನ 12.00 ರಿಂದ 1.00 ಗಂಟೆಯ ವರೆಗೆ ಕಛೇರಿಯ ಕಾಂಪೌಂಡ್ ಗೇಟ್ ಹಾಕಿ ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಚಾ.ಸಾ-2 ರವರು ಚಾ.ಸಾ-1 ರವರಿಗೆ ತಿಳಿಸಿ ಪಾಂಡವಪುರ ಠಾಣೆಯಲ್ಲಿ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ದಿಃ 21.09.2021 ರಂದು ಈಗ ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-**3** ಎಂದು ಗುರುತಿಸಲಾಯಿತು. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ. ವಕೀಲರಿಂದಃ</u>

**01.** ಪಂಚಾಯಿತಿಯಿಂದ ಕಲ್ಲುಗಳನ್ನು ಯಾವ ಸರ್ವೇ ನಂಬರ್ ನಲ್ಲಿ ನೆಟ್ಟರು ನನಗೆ ಗೊತ್ತಿಲ್ಲ. ಪಂಚಾಯಿತಿಯಿಂದ ಯಾವುದೇ ಕಲ್ಲುಗಳನ್ನು ನೆಟ್ಟಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**